**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.** DW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 22.08.2025

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನನಗೆ ಮನೆಗಳಿಂದ ಬಾಡಿಗೆ ಬರುತ್ತಿದ್ದು ನಾನು ಯಾವುದೇ ಕೆಲಸ ಮಾಡುತ್ತಿರುವುದಿಲ್ಲ. ನಾನು SSLC ಓದಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ತಂದೆಯ ಹೆಸರು ಪಾಪಾಯ್ಯ ಇರುತ್ತದೆ ಎಂದರೆ ಸರಿ.

ನನ್ನ ತಂದೆಗೆ 7 ಜನ ಮಕ್ಕಳು ಇರುತ್ತೇವೆ. ಆರ್.ರಾಜ್‌ಕುಮಾರ್ ರವರು ನನ್ನ ಅಣ್ಣ ಇರುತ್ತಾರೆ ಎಂದರೆ ಸರಿ. ಈ ಪ್ರಕರಣದ ವಾದಿಯು ಸದರಿ ರಾಜ್ ಕುಮಾರ್ ರವರ ಮಗ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ನನ್ನ ಅಕ್ಕ ಇರುತ್ತಾರೆ.

ನನ್ನ ತಂದೆಯವರು 1975 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿಯವರು 1992 ರಲ್ಲಿ ತೀರಿಕೊಂಡಿರುತ್ತಾರೆ. ನಾನು ಹಾಗೂ ನನ್ನ ತಾಯಿರವರು ಹೊಂಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.269/1 ರಲ್ಲಿ 33 ಗುಂಟೆ ಜಮೀನನ್ನು ಕೆಂಪಸಿಂಗೇಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಹಾಗೂ ನಿಮ್ಮ ತಾಯಿಯವರು ಹೊಂಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.269/2 ರಲ್ಲಿ 35 ಗುಂಟೆ ಜಮೀನನ್ನು ಸದರಿ ಕೆಂಪಸಿಂಗೇಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಅದೇ ರೀತಿ ನೀವು ಹಾಗೂ ನಿಮ್ಮ ತಾಯಿಯವರು ಹೊಂಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.270/1 ರಲ್ಲಿ 18 ಗುಂಟೆ ಜಮೀನನ್ನು ಸದರಿ ಕೆಂಪಸಿಂಗೇಗೌಡ ಎನ್ನುವವರಿಗೆ

ಮಾರಾಟ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಹಾಗೂ ನಿಮ್ಮ ತಾಯಿಯವರು ಹೊಂಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.270/3 ರಲ್ಲಿ 20 ಗುಂಟೆ ಜಮೀನನ್ನು ಸದರಿ ಕೆಂಪಸಿಂಗೇಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಆಸ್ತಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ವಾದಿಯ ತಾತ ಪಾಪಯ್ಯನವರು ತೀರಿಕೊಂಡ ನಂತರ ದಾವಾ ಸ್ವತ್ತು ವಾದಿಯ ಹೆಸರಿಗೆ ವಾರಸುದಾರಿಕೆ ಮುಖಾಂತರ ಖಾತೆಯಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಸ್ವತ್ತು ದಿನಾಂಕ 31.12.2012 ರಂದು ವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಯಾ ಹಿತಾಸಕ್ತಿ ಇರದಿದ್ದರೂ ಸಹಾ ವಿನಾಕಾರಣ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ವಾದಿ OS 403/2014 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ಸಲ್ಲಿಸಿದ ಕಾರಣ ನಾನು ಹಾಗೂ ಉಳಿದ ಪ್ರತಿವಾದಿಯರು ಈ ದಾವೆಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಹಾಗೂ ವಾದಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು 1980-81 ನೇ ಇಸವಿಯಲ್ಲಿ ಅನ್ಯಕ್ರಾಂತ ಆಗಿರುತ್ತದೆ. ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸೈಟ್ ಮಾಡುವ ಉದ್ದೇಶಕ್ಕಾಗಿ ದಾವಾ ಸ್ವತ್ತು ಅನ್ಯಕ್ರಾಂತ ಆಗಿರುತ್ತದೆ. ಆ ರೀತಿ ದಾವಾ ಸ್ವತ್ತು ಅನ್ಯಕ್ರಾಂತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅನ್ಯಕ್ರಾಂತ ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನ್ಯಕ್ರಾಂತ ಆಗಿರುತ್ತದೆ ಎಂದು ಸಲ್ಲಿಸಿರುವ

ದಾಖಲೆಗಳಿಗೆ ಸಂಬಂಧಿಸಿದ ಸ್ವತ್ತು ಹಾಗೂ ದಾವಾ ಸ್ವತ್ತು ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ.

ವಾದಿಯ ತಂದೆ 1979 ರಲ್ಲಿ ತೀರಿಕೊಂಡಿರುತ್ತಾರೆ. ವಾದಿ ತಂದೆಯ ಅಂತ್ಯಕ್ರಿಯೆಯಲ್ಲಿ ಸಹಾ ನಾನು ಭಾಗವಹಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿಯೇ ವಾದಿಯ ತಂದೆಯ ಅಂತ್ಯಕ್ರಿಯೇ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ತಂದೆಯ ಅಂತ್ಯಕ್ರಿಯೆಯು ನನ್ನ ತಾಯಿಯ ಹೆಸರಿಗೆ ಖಾತೆ ಇರುವ ಖಾಲಿ ಸ್ವತ್ತಿನಲ್ಲಿ ಆಗಿರುತ್ತದೆ. ವಾದಿ ತಂದೆಯ ಸಮಾಧಿಯು ಈಗಲೂ ಸಹಾ ದಾವಾ ಸ್ವತ್ತಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಇವತ್ತಿಗೂ ಸಹಾ ದಾವಾ ಸ್ವತ್ತಿನ ಪಹಣಿ ಪತ್ರಿಕೆ ವಾದಿಯ ಹೆಸರಿನಲ್ಲಿ ಬರುತ್ತಿದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 2012 ರಲ್ಲಿ ದಾವಾ ಸ್ವತ್ತು ಅನ್ಯಕ್ರಾಂತ ಆದಾಗ ಅದನ್ನು ರೌಂಡ್ ಅಪ್ ಮಾಡದೆ ಇದ್ದು ವಾದಿಯು ಅವರ ಹೆಸರಿಗೆ ಪೌತಿ ಖಾತೆಯನ್ನು ಕೂರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿಯು ಇವತ್ತಿಗೂ ಸಹಾ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ಅವರೇ ಅದರ ಕಂದಾಯವನ್ನು ಸಹಾ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಡಿ.2 ದಾಖಲೆಯನ್ನು ತೋರಿಸಿ ಸರ್ವೆ ನಂ.291 ರಲ್ಲಿ 20 ಗುಂಟೆ ಜಮೀನು ಅನ್ಯಕ್ರಾಂತ ಆಗಿರುವುದಕ್ಕೆ ಸಂಬಂಧಿಸಿದ ದಾಖಲೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈ ಸ್ವತ್ತಿಗೂ ಹಾಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿರುವ ಸ್ವತ್ತು ಹಾಗೂ ದಾವಾ ಸ್ವತ್ತು ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.3 ದಾಖಲೆಯು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಡಿ.2 ದಾಖಲೆಯನ್ನು ಲಕ್ಕೇಗೌಡರವರು ತೆಗೆದುಕೊಂಡು ಬಂದಿರುತ್ತಾರೆ. ಸದರಿ ಲಕ್ಕೇಗೌಡರು ಈ ಪ್ರಕರಣದ ಪಕ್ಷಕಾರರಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ಭಾವ ಇರುತ್ತಾರೆ ಎಂದು ನುಡಿಯುತ್ತಾರೆ. ನಿಡಿ.3 ದಾಖಲೆಯನ್ನು ಸಹಾ ಲಕ್ಕೇಗೌಡರವರೇ ತೆಗೆದುಕೊಂಡು ಬಂದಿರುತ್ತಾರೆ. ನಿಡಿ.1 ದಾಖಲೆಯನ್ನು ಸಹಾ ಲಕ್ಕೇಗೌಡರವರೇ ತೆಗೆದುಕೊಂಡು ಬಂದಿರುತ್ತಾರೆ.

ಪಾಂಡವಪುರ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇರುವ ಪ್ರಕರಣವು ಈಗಲೂ ಚಾಲ್ತಿಯಲ್ಲಿ ಇದೆ. ನಾನು ಹೇಳುವ ರೀತಿ ದಾವಾ ಸ್ವತ್ತಿನಲ್ಲಿ ಯಾವುದೇ ಮನೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ಇರುವ ಸ್ವತ್ತಿನ ಚೆಕ್ಕು ಬಂದಿ ಹೇಳಲು ಬರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಪೂರ್ವಕ್ಕೆ - ರಸ್ತೆ ಇರುತ್ತದೆ, ಪಶ್ಚಿಮಕ್ಕೆ - ದೇವಮ್ಮನ ಖಾತಾ ಸ್ವತ್ತು ಇರುತ್ತದೆ, ಉತ್ತರಕ್ಕೆ - ಸ್ಲೀಪರ್ ಕಾಲೋನಿ ರಸ್ತೆ ಇರುತ್ತದೆ, ದಕ್ಷಿಣಕ್ಕೆ - ಸತ್ತಾರ್ ರವರ ಖಾತೆ ಜಮೀನು ಪ್ರಸ್ತುತ ಶಿವೇಗೌಡರ ಮನೆ ಇರುತ್ತದೆ.

ನಾನು ಹಾಗೂ ಉಳಿದ ಪ್ರತಿವಾದಿಯರು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ ವಾದಿಯು ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಯಾ ಹಿತಾಸಕ್ತಿ ಇಲ್ಲದಿದ್ದರೂ ಸಹಾ ವಾದಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ನೀಡಿದ ಕಾರಣ ವಾದಿ ಶಾಶ್ವತ ನಿರ್ಬಂದಾಕಾಜ್ಞೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.